ಓ.ಎಸ್. ನಂ. 84/2013

ಪಿ.ಡಬ್ಲ್ಯು: 01( ಬಸಲಿಂಗಪ್ಪ)

ದಿನಾಂಕಃ 16-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ ಕೆ.ಜೆ.ಜಿ. ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 12 ಸೆಂಟ್ಸ್ ನಲ್ಲಿ ಸಂಪೂರ್ಣವಾಗಿ ಮನೆಯನ್ನು ಕಟ್ಟಿದ್ದೇವೆ ಎಂದು ಹೇಳಿದ್ದು ಅದನ್ನು ಅಕ್ಕ-ಪಕ್ಕದಲ್ಲಿ ಕಟ್ಟಿರುತ್ತಾರೆ. ನನ್ನ ಪ್ರಕಾರ ಅಕ್ಕ-ಪಕ್ಕದ ಮನೆಗೆ ಎರಡು ಲೈಸನ್ಸ್ ಇದ್ದು, ಅದಕ್ಕೆ ಒಂದೇ ಮನೆ ಸಂಖ್ಯೆ ಇರುತ್ತದೆ ಎಂದರೆ ಹೌದು. ನಿವೇಶನ ನೋಂದಣಿಯಾಗಿರುವುದು 1995 ರಲ್ಲಿ ಹಾಗೂ ಕಟ್ಟಡ ಲೈಸನ್ಸನ್ನು 2011 ರಲ್ಲಿ ಪಡೆದಿರುತ್ತೇವೆ ಎಂದರೆ ಹೌದು. ನಿಡಿ 1 ರಲ್ಲಿರುವ ಸಾಕ್ಷಿದಾರರು ಜೀವಂತ ಇಲ್ಲ. 1995 ರಿಂದ ಇಲ್ಲಿಯವರೆಗೆ ಆಸ್ತಿ ತೆರಿಗೆಯನ್ನು ಪಾವತಿ ಮಾಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎರಡೂ ಮನೆಗೆ 2 ಮಹಡಿಗಳು ಇದೆಯೇ ಎಂದರೆ ಒಂದು ಮನೆಗೆ ಮಾತ್ರ 2 ಮಹಡಿ ಇದೆ. 1995 ರಿಂದ 2011 ರವರೆಗೆ ನಾವು ಲೈಸೆನ್ಸ ಪಡೆಯಲು ಅರ್ಜಿ ಸಲ್ಲಿಸಿರುವುದಿಲ್ಲ ಏಕೆಂದರೆ 6 ½ ಸೆಂಟ್ಸ ಜಾಗ ವಾದಿಗಳ ಸ್ವಾಧೀನದಲ್ಲಿತ್ತು ಎಂದರೆ ಸರಿಯಲ್ಲ, ಅದು ನಮ್ಮ ಸ್ವಾಧೀನದಲ್ಲಿ ಇತ್ತು. ವಾದಿಯ ಸ್ವಾಧೀನದಲ್ಲಿದ್ದ ಜಾಗದಲ್ಲಿ ನಮ್ಮ ಮನೆಯ ಡೋರ್ ನಂಬರ್ ಹಾಕಿಸಿಕೊಂಡು ಪರವಾನಿಗೆ ಪಡೆದು ವಾದಿಯ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತೇವೆ ಎಂದರೆ ಒಂದೇ ಮನೆ ಸಂಖ್ಯೆ ಬರುತ್ತದೆ ಎಂದು ಹೇಳಿದ ಕಾರಣ ನಾವು ಸದರಿ ಜಾಗದಲ್ಲಿ ಮನೆ ಕಟ್ಟಿರುತ್ತೇವೆ. 2001 ರಲ್ಲಿ ಪಡೆದ ಪರವಾನಿಗೆ ಹಾಗೂ 2011 ರಲ್ಲಿ ಪಡೆದ ಪರವಾನಿಗೆಯಲ್ಲಿರುವ ಚೆಕ್‌ಬಂದಿ ಬೇರೆ ಬೇರೆ ಇರುತ್ತದೆ ಎಂದರೆ ಒಂದೇ ಇರುತ್ತದೆ. ಆದ ಕಾರಣ ಒಂದೇ ಮನೆ ಸಂಖ್ಯೆಗೆ 2 ಪರವಾನಿಗೆ ಇದೆ ಎಂದರೆ ಹೌದು.

ವಾದಿಗಳು ನಮಗೆ ತೊಂದರೆ ನೀಡುತ್ತಿದ್ದರು ಎಂದು ಹೇಳಿದ್ದು ಆ ಬಗ್ಗೆ ನಾನು ಯಾವುದೇ ಪೋಲಿಸ್ ದೂರನ್ನು ನೀಡಿರುವುದಿಲ್ಲ. ನಾವು 2 ಮನೆಗೆ ಕಂದಾಯವನ್ನು ಕಟ್ಟುತ್ತಿದ್ದೇವೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿವೆ. ಕೊಟ್ಟುರು ಪಟ್ಟಣ ಪಂಚಾಯತಿ ವ್ಯಾಪ್ತಿಗೆ ದಾವಾ ಸ್ವತ್ತು ಬರುತ್ತದೆ ಎಂದರೆ ಹೌದು. ಪರವಾನಿಗೆ ಪಡೆಯುವ ಸಲುವಾಗಿ ಕೃಷಿಯೇತರ ಪ್ರಮಾಣ ಪತ್ರ ನೀಡಿರುತ್ತೇನೆ. ನಾವು ಹಾಗೂ ಪ್ರತಿವಾದಿಗಳು ಸಂಬಂಧಿಕರು ಎಂದರೆ ದೂರದ ಸಂಬಂಧಿಕರು. ನಾವು ಅಕ್ಕ ತಂಗಿಯರ ಮಕ್ಕಳು ಎಂದರೆ ಹೌದು. ಮಾಜೀತ್ ಸಾಬ್ ನಮ್ಮ ಜಮೀನನ್ನು ಈಗ ಬಾಡಿಗೆಗೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಇಲ್ಲ. ಈಗ ನನ್ನ ಅಜ್ಜ ಹಾಗೂ ತಂದೆ ಜೀವಂತ ಇಲ್ಲ ಎಂದರೆ ಹೌದು. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕೃಷಿಯೇತರ ಜಮೀನಾಗಿರುವುದಿಲ್ಲ ಎಂದರೆ ಸರಿಯಲ್ಲ, ಪಟ್ಟಣ ಪಂಚಾಯತಿಯ ಎಲ್ಲಾ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ನನ್ನ ಪ್ರಮಾಣ ಪತ್ರದ 4 ನೇ ಲೈನಿನಲ್ಲಿ ಹೇಳಿರುವ

ಓ.ಎಸ್. ನಂ. 84/2013

ಪಿ.ಡಬ್ಲ್ಯು: 01( ಬಸಲಿಂಗಪ್ಪ)

ದಿಃ 17.02.1995 ರ ಕರಾರು ಪತ್ರ ಸುಳ್ಳು ಎಂದರೆ ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವುದು ನನಗೆ ಅರ್ಥ ಆಗುತ್ತಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡುತ್ತಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಮುಕ್ತಾಯ.

ಮರುವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.